ಶ್ರೀ ಕೆ. ಎಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೇ, ಈ ಯೋಜನೆ ನನಗೆ ಗೊತ್ತಿದ್ದ ಮಟ್ಟಿಗೆ ಕಳೆದ ಸುಮಾರು ಇಪ್ಪತ್ತು ವರ್ಷಗಳಿಂದಲೂ ನೆನೆಗುದಿಗೆ ಬಿದ್ದಿದೆ ಮತ್ತು ತಾಂತ್ರಿಕ ಕಾರಣಗಳು ಅಂದರೆ ನಿಮ್ಮ ಲೋಕೋಪಯೋಗಿ ಇಲಾಖೆ ಯಾವುದೇ ಕಾರಣಗಳಿಗೋಸ್ಕರ ನಿಂತಿರತಕ್ಕದ್ದಲ್ಲ. ಅರಣ್ಯ ಇಲಾಖೆಯ ತಕರಾರಿನಿಂದ ನಿಂತಿರತಕ್ಕದ್ದು. ಈಗ ತಮ್ಮ ಪಿಕ್‌ಅಪ್ ಯೋಜನೆಯೂ ಕೂಡ ಇಪ್ಪತ್ತಮೂರು ಎಕರೆ ಅರಣ್ಯ ಪ್ರದೇಶ ಅದರಲ್ಲಿ ಇನ್‌ವಾಲ್ವ್ ಆಗಿರುತ್ತದೆ ಮೂರು ಎಕರೆ ಭೂಮಿ ಮುಳುಗಡೆ ಆಗುತ್ತದೆ. ಇನ್ನು ಇಪ್ಪತ್ತು ಎಕರೆ ಭೂಮಿ ಕೇವಲ ನಾಲೆಯಲ್ಲಿ ಬರುತ್ತದೆ. ಅರಣ್ಯದಲ್ಲಿರತಕ್ಕಂಥ ವನ್ಯ ಪ್ರಾಣಿಗಳಿಗೂ ಅನುಕೂಲವಾಗಲೆಂದು ಅಭಿಪ್ರಾಯ ಇದೆ, ಆ ರೀತಿ ಆದರೆ ಶಾಂತಿ ಭಂಗಕ್ಕೆ ಈಡಾಗುತ್ತದೆಂದು ಅದನ್ನು ತಡೆಹಿಡಿದಿದ್ದಾರೆ. ಇದರ ನಿರ್ವಾಣಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ಮತ್ತು ಯಾವಾಗ ಈ ಕೆಲಸವನ್ನು ಪ್ರಾರಂಭ ಮಾಡುತ್ತೀರಿ, ಈಗಾಗಲೇ ಒಂದುಕಾಲು ಲಕ್ಷ ಖರ್ಚಾಗಿ ಅರ್ಧಕ್ಕೆ ನಿಂತಿರತಕ್ಕಂಥ ಈ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ, ದಯವಿಟ್ಟು ಸ್ಪಷ್ಟವಾಗಿ ಭರವಸೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಯೋಜನೆ ಮಂಜೂರಾಗಿರುವುದು ೧೯೭೯ರಲ್ಲಿ, ಅಂದರೆ ಆರು ವರ್ಷ ಆಗಿದೆ. ಈಗಾಗಲೇ ಇದಕ್ಕಾಗಿ ಒಂದು ಲಕ್ಷದ ಇಪ್ಪತ್ತೆರಡು ಸಾವಿರದ ಆರು ನೂರ ತೊಂಭತ್ತೆರಡು ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ಮಧ್ಯೆ ಅರಣ್ಯ ಇಲಾಖೆಯವರು ಎತ್ತಿದಂತಹ ತಕರಾರಿನಿಂದ ಈ ಕೆಲಸವನ್ನು ನಿಲ್ಲಿಸಿದ್ದೇವೆ, ಇದರಲ್ಲಿ ಮೂರು ನೂರು ಎಕರೆ ನೀರಾವರಿ ಮಾಡಬೇಕು ಎನ್ನತಕ್ಕಂಥ ಯೋಜನೆ ಇತ್ತು. ಈ ಯೋಜನೆಯನ್ನು ಕೈಗೆತ್ತಿಕೊಂಡರೆ ಅದರಲ್ಲಿ ೧೭೭ ಎಕರೆಯಷ್ಟು ಅರಣ್ಯ ಇಲಾಖೆಗೆ ನೀರು ಕೊಡತಕ್ಕದ್ದು ಇದೆ. ಅದರಲ್ಲಿ ಓರಿಜನಲ್ ಅಚ್ಚುಕಟ್ಟು ಇಲ್ಲ. ಎರಡು ಕೆರೆ ಹಿಂಭಾಗದ ಜಮೀನನ್ನು ಸೈಬಿಲೈಸ್ ಮಾಡಿದ್ದಾರೆ. ೧೭೦ ಎಕರೆ ಅರಣ್ಯದ ಭೂಮಿಯನ್ನು ರಿಲೀಸ್ ಮಾಡಿ ಅದನ್ನು ಅಚ್ಚುಕಟ್ಟಿಗೆ ತರತಕ್ಕಂಥ ಲೆಕ್ಕಾಚಾರ ಮಾಡಿದ್ದಾರೆ. ಈ ಪಿಕ್‌ಅಪ್ ಪರಿವರ್ತನೆ ಮಾಡುವುದರ ಮುಖಾಂತರ ಹೊಸ ನಾಲ್ಕು ಕೆರೆ ಹಿಂಭಾಗದಲ್ಲಿರತಕ್ಕ ಜಮೀನನ್ನು ಅಚ್ಚುಕಟ್ಟಾಗಿ ಸೈಬಿಲೈಸ್ ಮಾಡತಕ್ಕದ್ದು ಇದೆ. ಹೊಸ ಅಚ್ಚುಕಟ್ಟು ಮಾಡುವುದಕ್ಕೆ ಬರುವುದಿಲ್ಲ. ರಾವಂಲಿಂಗಯ್ಯನ ಕೆರೆ, ತಿಪ್ಪೇಸ್ವಾಮಿ ಕೆರೆ, ಈಚೆಗೆ ಇವೆರಡನ್ನು ಸೇರಿಸಿಕೊಂಡು ಹಿಂದೆ ಇದ್ದಂತಹ ತೋಟದ ಕೆರೆ, ಸವರಂಬಿ ಕೆರೆ. ಈ ನಾಲ್ಕು ಕೆರೆ ಅಚ್ಚುಕಟ್ಟನ್ನು ಸೈಬಿಲೈಸ್ ಮಾಡತಕ್ಕದ್ದು ಮತ್ತು ಪಿಕ್‌ಅಪ್ ಮಾಡುವುದು ಎಂದು ನಿರ್ಧಾರ ಮಾಡಿದ್ದೇವೆ. ೭.೩೦ ಲಕ್ಷ ರೂಪಾಯಿ ಇದಕ್ಕಾಗಿ ಅಂದಾಜು ಮಾಡಿದ್ದಾರೆ. ಇಪ್ಪತ್ತಮೂರು ಎಕರೆಯಲ್ಲಿ ಕೇವಲ ಮೂರು ಎಕರೆ ಮುಳುಗಡೆಯಾಗುತ್ತದೆ. ಉಳಿದ ಇಪ್ಪತ್ತು ಎಕರೆ ಭೂಮಿ ನಾಲೆಗೆ ಹೋಗುತ್ತದೆ. ಇದರ ಬಗ್ಗೆ ಅರಣ್ಯ ಇಲಾಖೆಗೂ ಮತ್ತು ಲೋಕೋಪಯೋಗಿ ಇಲಾಖೆಗೂ ಪತ್ರವ್ಯವಹಾರ ನಡೆಯುತ್ತಿದೆ. ಕೇಂದ್ರಸರ್ಕಾರದವರಿಂದ ಪರವಾನಿಗೆಯನ್ನು ತೆಗೆದುಕೊಳ್ಳಲಾಗಿದೆ. ನನಗೆ ತೀವ್ರತೆ ಇದೆ, ಆಸಕ್ತಿ ಇದೆ, ಇದರ ಬಗ್ಗೆ ಏನೇನು ನನ್ನ ಕಡೆಯಿಂದ ಎಷ್ಟು ಕೆಲಸ ಜರೂರು ಮಾಡಲು ಆಗುತ್ತದೆಯೋ ಅಷ್ಟು ಪ್ರಯತ್ನ ಮಾಡುತ್ತೇನೆ.

ಲೋಕೋಪಯೋಗಿ ಹಾಗೂ ನೀರಾವರಿ ಕಾರ್ಯನಿರ್ವಾಹಕ ಅಭಿಯಂತರರಿಗೆ ಪೂರ್ಣ ಆರ್ಥಿಕ ಅಧಿಕಾರದ ಬಗ್ಗೆ.

೬೬. ಶ್ರೀ ಜ್ಞಾನದೇವ ದೊಡ್ಡಮೇಟಿ. (ರೋಣ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಲೋಕೋಪಯೋಗಿ ಹಾಗೂ ನೀರಾವರಿ ಕಾರ್ಯ ನಿರ್ವಾಹಕ ಅಭಿಯಂತರರಿಗೆ ಪೂರ್ಣ ಆರ್ಥಿಕ ಅಧಿಕಾರ ಫೈನಾನ್ಸಿಯಲ್ ಪವರ್ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ತಾಲ್ಲೂಕು ಮಟ್ಟದ ಉಪ ವಿಭಾಗದ ಲೋಕೋಪಯೋಗಿ ಇಲಾಖೆಗೆ ಆರ್ಥಿಕ ಅಧಿಕಾರದ ಕೇಂದ್ರೀಕೃತದಿಂದ (ಸೆಂಟ್ರಲೈಜೇಷನ್ ಆಫ್ ಫೈನಾನ್ಸಿಯಲ್ ಪವರ್) ಸಣ್ಣ ಪುಟ್ಟ ಕೆಲಸಗಳಿಗೆ ತೊಂದರೆಯಾಗುವುದಿಲ್ಲವೆ.

ಇ) ಹಾಗಿದ್ದಲ್ಲಿ, ಲೋಕೋಪಯೋಗಿ ಹಾಗೂ ನೀರಾವರಿ ಇಲಾಖೆಯಲ್ಲಿ ಆರ್ಥಿಕ ವಿಕೇಂದ್ರೀಕರಣ ಮಾಡುವ ವಿಚಾರ ಸರಕಾರಕ್ಕೆ ಇದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) —

ಅ) ಈಗಿರುವ ಆರ್ಥಿಕ ಅಧಿಕಾರದ ಆಜ್ಞೆಯಂತೆ ಕೆಲವು ಸೀಮಿತ ಆರ್ಥಿಕ ಅಧಿಕಾರಗಳನ್ನು ಕಾರ್ಯ ನಿರ್ವಾಹಕ ಅಭಯಂತರರಿಗೆ ನೀಡಿರುತ್ತದೆ, ಮತ್ತು ಅವನ್ನು ಕೆಲವು ಷರತ್ತಿನೊಳಗೊಂಡು ನಿರ್ವಹಿಸಬೇಕೆಂದಿದೆ.

ಆ) ರೂಪಾಯಿ ೧೦,೦೦೦-೦೦ ವರೆಗಿನ ಕೆಲಸಕ್ಕೆ ತಾಂತ್ರಿಕ ಮಂಜೂರಾತಿಯನ್ನು ನೀಡಲು ಉಪ-ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಅಭಯಂತರರಿಗೆ ಅಧಿಕಾರವನ್ನು ಸಂಬಂಧಪಟ್ಟ ಅಧೀಕ್ಷಕ ಅಭಿಯಂತರರವರ ಪೂರ್ವ ಅನುಮೋದನೆಯನ್ನು ಕಾರ್ಯ ಕ್ರಮಕ್ಕೆ ಪಡೆದು ನಿರ್ವಹಿಸಲು ನೀಡಿದೆ. ಹೆಚ್ಚಿನ ಅಧಿಕಾರವನ್ನು ಸಹಾಯಕ ಅಭಯಂತರರಿಗೆ ನೀಡದೇ ಇರುವುದರಿಂದ ಯಾವುದೇ ರೀತಿಯಿಂದಲೂ ಕೆಲಸಕ್ಕೆ ತೊಂದರೆಯಾಗಿರುವುದಿಲ್ಲ.

ಇ) ಇನ್ನು ಹೆಚ್ಚಿನ ಆರ್ಥಿಕ ವಿಕೇಂದ್ರೀಕರಣ ಮಾಡುವ ಪ್ರಸ್ತಾವನೆಯು ಸರಕಾರದ ಮುಂದೆ ಇಲ್ಲ,

ಶ್ರೀ ಜ್ಞಾನದೇವ ದೊಡ್ಡನೇಟಿಯವರು.— ಹಾಗಿದ್ದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಗೆ ಎಷ್ಟು ರೂ.ಗಳ ಕೆಲಸಕ್ಕೆ ಸ್ವತಂತ್ರವಾಗಿ ತಾಂತ್ರಿಕ ಮಂಜೂರಾತಿ ನೀಡಲು ಅಧಿಕಾರ ಇದೆ.

ಶ್ರೀ ಹೆಚ್. ಡಿ. ದೇವೇಗೌಡ — ೧೦,೦೦೦ ರೂ.ಗಳವರೆಗೆ. ವಾರ್ಷಿಕ ಪ್ರೋಗ್ರಾಮನ್ನು ಮೊದಲು ಮಾಡಬೇಕು. ಸ್ಪೆಷಲ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರಿಗೆ ಕಳಿಸಿಕೊಡಬೇಕು. ಅವರು ಅದನ್ನು ಮಂಜೂರು ಮಾಡಿದ ಮೇಲೆ ಮೇಲಿನ ಮೊಬಲಗಿನ ಮಂಜೂರಾತಿ ಮಾಡಲು ಸಾಧ್ಯ.

ಶ್ರೀ ಕೂಡಲಸಂಗಮೇಶ್ವರ ದೇವಸ್ಥಾನದ ಮುಳುಗಡೆ

೧೬೩. ಶ್ರೀ ಶಿವಸಂಗಪ್ಪ ಶಿದ್ದಪ್ಪ ಕಡಪಟ್ಟಿ (ಹುನಗುಂದ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ನಾರಾಯಣಪುರದ ಬಳಿ ಕೃಷ್ಣಾ ನದಿಗೆ ಅಡ್ಡಲಾಗಿ ಆಣೆಕಟ್ಟನ್ನು ನಿರ್ಮಿಸಿರುವ ಶ್ರೀ ಕೂಡಲ ಸಂಗಮೇಶ್ವರ ದೇವಸ್ಥಾನ ಹಾಗೂ ಶ್ರೀ ಬಸವೇಶ್ವರರ ಐಕ್ಯ ಸ್ಥಳಗಳು ಮುಳುಗಡೆಯಾಗಲಿದ್ದು ಆ ಬಗ್ಗೆ ತ್ವರಿತ ಕ್ರಮಗಳನ್ನು ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

(ಆ) ಹಾಗಿದ್ದಲ್ಲಿ, ಆ ಬಗ್ಗೆ ತ್ವರಿತ ಕ್ರಮಗಳನ್ನು ಕೈಗೊಂಡು ಸದರಿ ಸ್ಥಳವನ್ನು ಯಾತ್ರಾಸ್ಥಳವನ್ನಾಗಿ ಯಾವಾಗ ಮಾಡಲಾಗುವುದು,

(ಇ) ಸದರೀ ಪ್ರದೇಶದ ಜನತೆಯು ನಾರಾಯಣಪುರ ಜಲಾಶಯಕ್ಕೆ 'ಬಸವ ಸಾಗರ' ಎಂದು ನಾಮಕರಣ ಮಾಡಲು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆಯೇ,

(ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಈ ಬಗ್ಗೆ ತ್ವರಿತ ಕ್ರಮಗಳನ್ನು ಕೈಗೊಳ್ಳಲಾಗಿದೆ,

(ಆ) ಈಗಾಗಲೇ ಕಾಮಗಾರಿಗಳು ನಡೆಯುತ್ತಿದೆ,

(ಇ) ಮನವಿ ಬಂದಿದೆ,

(ಈ) ಸರ್ಕಾರದ ಪರಿಶೀಲನೆಯಲ್ಲಿದೆ,